

# ‘ಬಾಹುಬಲಿ’ ನಿರ್ಮಾಪಕರ ‘ಸೂಪರ್’ ಧಾರಾವಾಹಿ ಗಿರಿಜಾ ಕಲ್ಯಾಣ

ಇತ್ತೀಚೆಗೆ ಶಿವಭಕ್ತಿ ಆಧಾರಿತ ಹಲವಾರು ಧಾರಾವಾಹಿಗಳು ಬಂದಿದ್ದರೂ ತನ್ನದೇ ಆದ ಹೊಸತನದಿಂದ ಜನಮಾನಸವನ್ನು ಗೆದ್ದಿದ್ದು ‘ಗಿರಿಜಾ ಕಲ್ಯಾಣ.’

ಭಾರತೀಯ ಚಲನಚಿತ್ರರಂಗದಲ್ಲಿ ದಾಖಲೆ ಸೃಷ್ಟಿಸಿದ ‘ಬಾಹುಬಲಿ’ ಚಲನಚಿತ್ರ ನಿರ್ಮಿಸಿದ ಅರ್ಕಾ ಮೀಡಿಯಾ ಈಗ ಕಿರುತೆರೆಯಲ್ಲಿ ಅಂಥದೇ ಅದ್ದೂರಿ ಸಾಮಾಜಿಕ–ಪೌರಾಣ ಕ ಧಾರಾವಾಹಿಯನ್ನು ನಿರ್ಮಾಣ ಮಾಡುತ್ತಿದೆ. ಅದುವೇ ‘ಗಿರಿಜಾ ಕಲ್ಯಾಣ.’



ಕನ್ನಡ ಟೆಲಿವಿಷನ್ ಇತಿಹಾಸದಲ್ಲಿ ಅತ್ಯಂತ ದುಬಾರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ‘ಗಿರಿಜಾ ಕಲ್ಯಾಣ’ವನ್ನು ನಿರ್ದೇಶಿಸುತ್ತಿರುವವರು ನಾಯಕ ನಟ ನವೀನ್ ಕೃಷ್ಣ. ಈಗಾಗಲೇ ಚಿತ್ರರಂಗದಲ್ಲಿ ತಮ್ಮ ಸಾಹಿತ್ಯ, ಸಂಭಾಷಣೆ, ಗಾಯನ ಮತ್ತು ಅಭಿನಯದಿಂದ ಹೆಸರು ಮಾಡಿರುವ ನವೀನ್ ಕೃಷ್ಣ, ಈ ಧಾರಾವಾಹಿಯಿಂದ ನೋಡುಗರಿಗೆ ಸುಂದರ ಚಲನಚಿತ್ರವೊಂದನ್ನು ನೋಡುವ ಅನುಭವ ನೀಡುತ್ತಿದ್ದಾರೆ. ಆಪ್ತಮಿತ್ರ, ಸಂಗೊಳ್ಳಿ ರಾಯಣ್ಣ ಚಿತ್ರಗಳ ಛಾಯಾಗ್ರಾಹಕ ರಮೇಶ್ ಬಾಬು, ಚಲನಚಿತ್ರಗಳ ಕಲಾ ನಿರ್ದೇಶಕ ಹೊಸ್ಮನೆ ಮೂರ್ತಿ, ಗಜಕೇಸರಿ ಚಿತ್ರದ ವಿನ್ಯಾಸಕಿ ಶಾಚೀನ ಹೆಗ್ಗಾರ್ ಮತ್ತು ನಾಗರಾಜ್ ತಮ್ಮ ಚಿತ್ರರಂಗದ ಅನುಭವವನ್ನು ಕಿರುತೆರೆಗೆ ತಂದು ವೀಕ್ಷಕರಿಗೆ ಸಿನೆಮಾ ನೋಡಿದ ಅನುಭವ ನೀಡಿರುವುದು ವಿಶೇಷ.

ಹಲವು ಚಿತ್ರಗಳಿಗೆ ಸಂಗೀತ ನೀಡಿರುವ ರವೀಶ್, ನೃತ್ಯ ಸಂಯೋಜಕರಾಗಿ ಮದನ್ ಹರಿಣ ಮತ್ತು ಮೇಕಪ್‌ನಲ್ಲಿ ಕುಮಾರ್ ಈ ಅದ್ದೂರಿ ಧಾರಾವಾಹಿಯ ಭಾಗವಾಗಿದ್ದಾರೆ.

ಹೈದರಾಬಾದ್, ತಮಿಳುನಾಡು ಮತ್ತು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಚಿತ್ರಿತವಾಗುತ್ತಿರುವ ಈ ಧಾರಾವಾಹಿಯ ಚಿತ್ರಕಥೆ– ಅನಂತ ಶಾಂದ್ರೇಯ, ಸಂಭಾಷಣೆ– ಅಕ್ಷಯ್ ಸತ್ಯ, ಸಂಕಲನ– ಸತ್ಯ ಭಾರಧ್ವಾಜ್ ಮತ್ತು ಸುಧರ್ಶನ ರಾವ್ ನಿರ್ವಹಿಸುತ್ತಿದ್ದಾರೆ.

ನಾಯಕ ನಾಯಕಿಯರಾಗಿ ಭರತ್ ಬೋಪಣ್ಣ ಮತ್ತು ಐಶ್ವರ್ಯ ಅಭಿನಯಿಸುತ್ತಿದ್ದು ಜನರಿಗೆ ಈ ಜೋಡಿ ಮೋಡಿ ಹಾಕಿರುವುದು ಸತ್ಯ. ಮುಖ್ಯ ಭೂಮಿಕೆಯಲ್ಲಿ ಮೈಕೋ ಮಂಜು, ಸಪ್ನಾ ರಾಜ್, ಲಕ್ಷ್ಮೀ ಹೆಗಡೆ, ವಿಜಯ್ ಕೌಂಡಿನ್ಯ, ಶ್ರೀಕಾಂತ್ ಹೆಬ್ಳೀಕರ್, ನಾಗಾರ್ಜುನ್ ಮತ್ತಿತರರು ಇದ್ದಾರೆ. ಶಿವ ಪಾರ್ವತಿಯರ ಪಾತ್ರಗಳಲ್ಲಿ ಚೇತನ್ ಚಂದ್ರ ಮತ್ತು ನಿತ್ಯಾ ರಾಮ್ ಅಭಿನಯಿಸುತ್ತಿದ್ದು ಈಗಾಗಲೇ ಬೆಳ್ಳಿತೆರೆಯಲ್ಲಿ ಹೆಸರು ಮಾಡಿರುವ ಈ ನಟ ನಟಿ ಕಿರುತೆರೆಯಲ್ಲಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ಚಿತ್ರರಂಗದ ಹಿರಿಯ ಕಲಾವಿದರಾದ ಉಮೇಶ್, ರಾಜೇಶ್, ಶ್ರೀನಿವಾಸ ಮೂರ್ತಿ, ವಸಿಷ್ಠ ಸಿಂಹ, ರಮೇಶ್ ಭಟ್ ಮುಂತಾದವರು ಗಿರಿಜಾ ಕಲ್ಯಾಣ ಧಾರಾವಾಹಿಗೆ ತಮ್ಮ ಅಭಿನಯ ಅನುಭವದ ಧಾರೆ ಎರೆದಿದ್ದಾರೆ.

**ಕಥಾವಸ್ತು**

ಹದಿನೆಂಟನೇ ಶತಮಾನದಲ್ಲಿ ನಡೆಯುವ ಕಥೆ ಇದು. ಗಿರಿಜೆ ಎಂಬ ಶಿವಭಕ್ತೆ ದುಷ್ಟ ರಾಜ ಅಮರದೇವನಿಗೆ ಸವಾಲಾಗಿರುತ್ತಾಳೆ. ಲೋಕ ಕಲ್ಯಾಣಕ್ಕಾಗಿ ಅವಳು ಮಾಡುವ ಕಾರ್ಯಗಳಿಗೆ ಸ್ವತಃ ಶಿವಪಾರ್ವತಿಯರೇ ನೆರವಾಗುತ್ತಾರೆ. ಮತ್ತು ಅಮರದೇವನ ಪುತ್ರ ರಾಜವರ್ಧನನ ಸಹಾಯವೂ ಆಕೆಗೆ ದೊರೆಯುತ್ತದೆ. ಸೂಪರ್ ಚಾನಲ್‌ನಲ್ಲಿ ಪ್ರಸಾರವಾಗುತ್ತಿರುವ ಗಿರಿಜಾ ಕಲ್ಯಾಣ ಧಾರಾವಾಹಿಯು ವೀಕ್ಷಕರ ಮನ ಗೆಲ್ಲುವುದರಲ್ಲಿ ಸಫಲವಾಗಿದೆ.

ಹಳೆ ಬೇರು ಹೊಸ ಚಿಗುರುಗಳನ್ನು ಇಟ್ಟುಕೊಂಡು ನವ ನವೀನ ಕಥಾನಕಗಳನ್ನು ತರಲಿರುವ ಸೂಪರ್ ಚಾನೆಲ್ ವಯಾಕಾಮ್ 18 ಸಂಸ್ಥೆಯ ಇನ್ನೊಂದು ಕನ್ನಡ ಚಾನೆಲ್ ಆಗಿದ್ದು ರಾಕಿಂಗ್ ಸ್ಟಾರ್ ಯಶ್ ಇದರ ರಾಯಭಾರಿ ಆಗಿದ್ದಾರೆ.

ವಯಾಕಾಮ್ 18 ನ ಕಲರ್ಸ್ ಕನ್ನಡ ಈಗಾಗಲೇ ಕನ್ನಡ ಮನರಂಜನಾ ಚಾನೆಲ್‌ಗಳ ಪೈಕಿ ಅಗ್ರ ಸ್ಥಾನದಲ್ಲಿದೆ.